ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 14-10-2024**

<u>ಪಾಟೀ ಸವಾಲು</u> :1 ನೇ ಆರೋಪಿ ಪರಃ ಶ್ರೀಮತಿ ಎಸ್ ಎನ್ ಕೆ ವಕೀಲರಿಂದಃ

ನನ್ನ ಮನೆಯ ಅಕ್ಕ ಪಕ್ಕ ಸಾಕಷ್ಟು ಮನೆಗಳು ಇವೆ ಹಾಗೂ ಸಾರ್ವಜನಿಕ ಡಂಬಾರು ರಸ್ತೆ ಇದೆ. ಬೈಕ್ ನಾನು ಪಿರ್ಯಾದಿ ಕೊಟ್ಟ ದಿನವೇ ಕಳುವಾಗಿರುತ್ತದೆ. ಬೆಳಿಗ್ಗೆ ಮನೆಯಿಂದ ಹೊರಗೆ ಬಂದಾಗ ಗೇಟಿನ ಒಳಗೆ ಬೈಕ್ ಇರುವುದಿಲ್ಲ ಹಾಗೂ ಗೇಟ್ ತೆರೆದಿತ್ತು. ನಂತರ 10.00 ರಿಂದ 10.30 ಸಮಯಕ್ಕೆ ಠಾಣೆಗೆ ಹೋಗಿ ಪಿರ್ಯಾದಿ ನೀಡಿರುತ್ತೇನೆ. ಪಿರ್ಯಾದಿಯನ್ನು ನಾನೇ ಬರೆದಿರುತ್ತೇನೆ. ಘಟನೆ ಆಗಿದೆ ಎಂದು ಹೇಳುವ ಎಷ್ಟು ದಿನಗಳ ನಂತರ ಪೋಲಿಸರು ತಕ್ಷೀರು ಸ್ಥಳಕ್ಕೆ ಬಂದಿರುತ್ತಾರೆ ಎಂದು ಈಗ ನೆನಪಿಲ್ಲ. ಸ್ಥಳಕ್ಕೆ 2-3 ಜನ ಪೋಲಿಸರು ಬಂದಿರುತ್ತಾರೆ. ತಕ್ಷೀರು ಮಹಜರು ನಡೆದಿದೆ ಎಂದು ಹೇಳುವ ಸಮಯದಲ್ಲಿ ಹತ್ತಿರದ ಮನೆಯವರು ಸೇರಿದ್ದರು. ತಕ್ಷೀರು ಮಹಜರಿಗೆ ನಮ್ಮ ನೆರೆಕೆರೆಯವರು ಸಹಿ ಮಾಡಿರುತ್ತಾರೆ. ಅವರು ನನಗೆ ಪರಿಚಯದವರು. ಮಹಜರಿಗೆ ಸ್ಥಳದಲ್ಲಿಯೇ ಸಹಿ ಹಾಕಿರುತ್ತೇನೆ. ಎಷ್ಟು ಸಹಿ ಎಂದು ನೆನಪಿಲ್ಲ. ಮಹಜರನ್ನು ಪೋಲಿಸರು ತಯಾರಿಸಿರುತ್ತಾರೆ. ಮಹಜರನ್ನು ಸಂಜೆ 4-5 ಗಂಟೆಗೆ ತಯಾರಿಸಿರುತ್ತಾರೆ. ನನ್ನ ಬೈಕ್ ನಂಬರ್ ಕೆಎ-20-ವಿ-4778 ಆಗಿರುತ್ತದೆ. ಈ ಪ್ರಕರಣದಲ್ಲಿ ನನ್ನ ಬೈಕನ್ನು ಯಾರು ಕಳ್ಳತನ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಘಟನೆಗೂ, ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> :3 ನೇ ಆರೋಪಿ ಪರಃ ಶ್ರೀಮತಿ ಎಸ್ ಟಿ ಎ ವಕೀಲರಿಂದಃ

ನನಗೆ ಚಾಸಾ 2 ರಿಂದ 8 ಪರಿಚಯ ಇದೆ. ನನ್ನ ಬೈಕ್ ಯಾವಾಗ ಕಳ್ಳತನ ಆಗಿರುತ್ತದೆ ಎಂದು ಈಗ ನೆನಪಿಲ್ಲ. ಪಿರ್ಯಾದಿಯನ್ನು ನಾನೇ ಠಾಣೆಯಲ್ಲಿ ಬರೆದುಕೊಟ್ಟಿರುತ್ತೇನೆ. ಪೋಲಿಸರು ಯಾವ ಕ್ರಮದಲ್ಲಿ ಬರೆಯಬೇಕು ಎಂದು ಹೇಳಿರುತ್ತಾರೆ. ಘಟನೆ ಆಗಿದೆ ಎಂದು ಹೇಳುವ ದಿನವೇ ಪಿರ್ಯಾದಿ ಕೊಟ್ಟಿರುತ್ತೇನೆ. ಬೆಳಿಗ್ಗೆ 10.00 ರಿಂದ 10.30 ಸುಮಾರಿಗೆ ದೂರು ನೀಡಿರುತ್ತೇನೆ. ಬೈಕನ್ನು ನಮ್ಮ ಕಂಪೌಂಡ್‌ನ ಒಳಗೆ ನಿಲ್ಲಿಸಿರುತ್ತೇನೆ. ಗೇಟಿಗೆ ಲಾಕ್ ಮಾಡಿರುವುದಿಲ್ಲ. ನಮ್ಮ ಮನೆಯ ರಸ್ತೆಗೆ ಬೀದಿ ದೀಪದ ವ್ಯವಸ್ಥೆ ಇದೆ. ಹಗಲು ಹೊತ್ತಿನಲ್ಲಿ ಜನ ಸಂಚಾರ ಇದೆ. ಮಧ್ಯರಾತ್ರಿಯ ನಂತರ ಜನ ಸಂಚಾರ ಇರುವುದಿಲ್ಲ. ಪಿರ್ಯಾದಿ ನೀಡಿದ ಸಂಜೆ 4.00-5.00 ಗಂಟೆಗೆ ಪೋಲಿಸರು ಬಂದಿರುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದು 1.00 ಗಂಟೆ ಸಮಯದವರೆಗೂ ಸ್ಥಳದಲ್ಲಿಯೇ ಇದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಠಾಣೆಗೆ 2-3 ಬಾರಿ ಹೋಗಿರುತ್ತೇನೆ. ಪೋಲಿಸರು ಹೇಳಿದ ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ತಕ್ಷೀರು ಸ್ಥಳದಲ್ಲಿ ದಾಖಲೆಯನ್ನು ಪೋಲಿಸರು ಬರೆದು ತಂದಿರುತ್ತಾರೆ ಎಂದರೆ ನೆನಪಿಲ್ಲ. ಆ ದಾಖಲೆಗಳಿಗೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಮೂರು ಜನ ಪೋಲಿಸರು ಬಂದಿದ್ದರು. ಭಾವಚಿತ್ರ ತೆಗೆದಿರುತ್ತಾರೆ. ಎಷ್ಟು ಜನ ಭಾವಚಿತ್ರದಲ್ಲಿ ಇರುತ್ತಾರೆ ಎಂದು ನೆನಪಿಲ್ಲ. ಘಟನೆ ನಡೆದ 6 ದಿನಗಳ ನಂತರ ನನ್ನ ಬೈಕ್ ಸಿಕ್ಕಿರುತ್ತದೆ. ಪೋಲಿಸರು ಬೈಕನ್ನು ಕುಕ್ಕುಂದೂರಿನ ಗ್ರಾಮದ ಹಾಡಿಯಿಂದ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ಹೇಳಿದ್ದು ನಾನು ಠಾಣೆಯಲ್ಲಿ ಬೈಕ್ ನೋಡಿರುತ್ತೇನೆ. ಸದರಿ ಹಾಡಿಯ ಹೆಸರು ಗೊತ್ತಿಲ್ಲ. ನನ್ನ ಬೈಕನ್ನು ಯಾರು ಕಳುವು ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಬೈಕ್ ಸಿಕ್ಕಿದ ನಂತರ ಈ ಪ್ರಕರಣದ ಆರೋಪಿಗಳು ಬೈಕ್ ಕದ್ದಿರುತ್ತಾರೆ ಎಂದು ಪೋಲಿಸರು ತಿಳಿಸಿರುತ್ತಾರೆ. ನಾನು

ಖುದ್ದಾಗಿ ಆರೋಪಿಗಳನ್ನು ಗುರುತಿಸಿರುವುದಿಲ್ಲ. ಆರೋಪಿತರನ್ನು ಪೋಲಿಸರು ಮನೆಗೆ ಕರೆದುಕೊಂಡು ಬಂದು ಮಹಜರು ಮಾಡಿರುತ್ತಾರೆ. ಎಷ್ಟು ಜನರನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ನೆನಪಿಲ್ಲ. ಈ ಎಲ್ಲಾ ವಿಚಾರಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ಆರೋಪಿತರಿಗೂ, ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪಿರ್ಯಾದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ